**ಪ್ರಿಯ ಓದುಗರೇ,**

*ಪ್ರತಿಭಾ ಪತ್ರಿಕೆ* ಪ್ರತಿ ತಿಂಗಳು ನಿಮ್ಮನ್ನು ತಲುಪುತ್ತದೆ. ಆದರೆ ವಿಜ್ಞಾನ, ತರ್ಕ, ಪ್ರಕೃತಿ ಮತ್ತು ಜೀವನದ ಬಗ್ಗೆ ಕುತೂಹಲ ಮೂಡಿಸುವ ಅನೇಕ ವಿಷಯಗಳು ಒಂದು ತಿಂಗಳು ಕಾಯುವುದಿಲ್ಲ. ಆದ್ದರಿಂದ ಪತ್ರಿಕೆಯ ಜೊತೆಗೆ, ಮಧ್ಯಂತರದಲ್ಲಿಯೂ ನನ್ನ ವೆಬ್‌ಸೈಟ್‌ನಲ್ಲಿ ಇಂತಹ ಚಿಕ್ಕ, ಚಿಂತನೆಯನ್ನು ಪ್ರೇರೇಪಿಸುವ ಲೇಖನಗಳನ್ನು ಪ್ರಕಟಿಸುತ್ತೇನೆ. ಇವು ಕೇವಲ ಮಾಹಿತಿ ನೀಡುವುದಕ್ಕಾಗಿ ಅಲ್ಲ; ಯೋಚಿಸಲು, ಪ್ರಶ್ನೆಗಳನ್ನು ಕೇಳಲು ಮತ್ತು ವಿಜ್ಞಾನವನ್ನು ಹೊಸ ದೃಷ್ಟಿಯಿಂದ ನೋಡುವಂತೆ ಮಾಡುವ ಒಂದು ಸಣ್ಣ ಪ್ರಯತ್ನ

**– ಜಯರಾಮ ಎ. ಎಸ್.**

# ಒಂದು ಚಿಕ್ಕ ಪಾಟ್ ಗಿಡವೇ ನಿಮ್ಮ ಆಮ್ಲಜನಕ ಕಾರ್ಖಾನೆಯೇ?




ಮನೆಯೊಳಗೆ ಒಂದು ಸುಂದರವಾದ ಪಾಟ್ ಗಿಡ ಇಟ್ಟರೆ ಸಾಕಷ್ಟು ಆಮ್ಲಜನಕ ಸಿಗುತ್ತದೆ ಎಂಬ ನಂಬಿಕೆ ಅನೇಕ ಜನರಲ್ಲಿದೆ. ನೀವು ಕೂಡ ಹೀಗೆಯೇ ಯೋಚಿಸುತ್ತೀರಾ? ಉತ್ತರಿಸುವ ಮೊದಲು ಒಂದು ಪ್ರಶ್ನೆ, ಒಬ್ಬ ವಯಸ್ಕ ವ್ಯಕ್ತಿಗೆ ಒಂದು ದಿನಕ್ಕೆ ಎಷ್ಟು ಆಮ್ಲಜನಕ

ಬೇಕಾಗುತ್ತದೆ ಎಂದು ನಿಮಗೆ ಗೊತ್ತೇ? ಐದು ಲೀಟರ್? ಐವತ್ತು ಲೀಟರ್? ಅಥವಾ ಅದಕ್ಕಿಂತ ಹೆಚ್ಚು?

ವಾಸ್ತವವಾಗಿ, ಒಬ್ಬ ವ್ಯಕ್ತಿಗೆ ದಿನಕ್ಕೆ ಸುಮಾರು **550 ಲೀಟರ್ ಶುದ್ಧ ಆಮ್ಲಜನಕ** ಬೇಕಾಗುತ್ತದೆ. ಅಂದರೆ ಸುಮಾರು **0.8 ಕಿಲೋಗ್ರಾಂ** ಆಮ್ಲಜನಕ.




ಈ ಅಂಕಿ ಕೇಳಿದ ನಂತರ ಇನ್ನೊಂದು ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ.

## ನಮ್ಮ ಮನೆಯಲ್ಲಿರುವ ಒಂದು ಚಿಕ್ಕ ಪಾಟ್ ಗಿಡ ದಿನಕ್ಕೆ ಎಷ್ಟು ಆಮ್ಲಜನಕವನ್ನು ಉತ್ಪಾದಿಸಬಹುದು?

ಗಿಡಗಳು ದ್ಯುತಿಸಂಶ್ಲೇಷಣೆ ಎಂಬ ಪ್ರಕ್ರಿಯೆಯಲ್ಲಿ ಸೂರ್ಯನ ಬೆಳಕಿನ ಸಹಾಯದಿಂದ ತಮ್ಮ ಆಹಾರವನ್ನು ತಯಾರಿಸಿಕೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಆದರೆ ಈ ಪ್ರಕ್ರಿಯೆ ಚೆನ್ನಾಗಿ ನಡೆಯಲು ಸಾಕಷ್ಟು ಸೂರ್ಯನ ಬೆಳಕು, ಆರೋಗ್ಯಕರ ಎಲೆಗಳು ಮತ್ತು ಸೂಕ್ತ ಬೆಳವಣಿಗೆ ಅಗತ್ಯ. ಮನೆಯೊಳಗೆ ಸಾಮಾನ್ಯವಾಗಿ ನೇರ ಸೂರ್ಯನ ಬೆಳಕು ಕಡಿಮೆ ಇರುವುದರಿಂದ ಪಾಟ್ ಗಿಡಗಳು

ಉತ್ಪಾದಿಸುವ ಆಮ್ಲಜನಕದ ಪ್ರಮಾಣವೂ ಕಡಿಮೆಯಾಗುತ್ತದೆ.

ಇದನ್ನು ಒಂದು ಸರಳ ಲೆಕ್ಕದಿಂದ ಅರ್ಥಮಾಡಿಕೊಳ್ಳಬಹುದು. ಒಬ್ಬ ವ್ಯಕ್ತಿಗೆ ದಿನಕ್ಕೆ ಸುಮಾರು 550 ಲೀಟರ್ ಆಮ್ಲಜನಕ ಬೇಕಾದರೆ, ಒಂದು ಚಿಕ್ಕ ಪಾಟ್ ಗಿಡವು ಉತ್ಪಾದಿಸುವ ಆಮ್ಲಜನಕ ಅದಕ್ಕೆ ಹೋಲಿಸಿದರೆ ಬಹಳ ಕಡಿಮೆ. ಆದ್ದರಿಂದ ಒಬ್ಬ ವ್ಯಕ್ತಿಯ ದಿನದ ಅಗತ್ಯವನ್ನು ಪೂರೈಸಲು ಒಂದು ಅಥವಾ ಎರಡು ಪಾಟ್ ಗಿಡಗಳು ಸಾಕಾಗುವುದಿಲ್ಲ.

ಅಂದಾಜು ಮಾಡಿದರೆ ಸಾವಿರಾರು ಪಾಟ್ ಗಿಡಗಳು ಬೇಕಾಗಬಹುದು.




ಹಾಗಾದರೆ ಮನೆಯೊಳಗೆ ಗಿಡ ಇಡುವುದೇ ತಪ್ಪೇ?

ಖಂಡಿತ ಇಲ್ಲ, ಗಿಡಗಳು ಮನೆಯ ಸೌಂದರ್ಯವನ್ನು ಹೆಚ್ಚಿಸುತ್ತವೆ, ಮನಸ್ಸಿಗೆ ನೆಮ್ಮದಿ ನೀಡುತ್ತವೆ, ಪ್ರಕೃತಿಯೊಂದಿಗಿನ ನಮ್ಮ ನಂಟನ್ನು ಗಟ್ಟಿಗೊಳಿಸುತ್ತವೆ. ಕೆಲವು ಗಿಡಗಳು

ಗಾಳಿಯಲ್ಲಿರುವ ಕೆಲವು ಮಾಲಿನ್ಯಕಾರಕಗಳನ್ನು ಅಲ್ಪ ಪ್ರಮಾಣದಲ್ಲಿ ಹೀರಿಕೊಳ್ಳಲೂ ಸಹಾಯ ಮಾಡಬಹುದು. ಆದರೆ ಒಂದು ಚಿಕ್ಕ ಪಾಟ್ ಗಿಡವೇ ನಮ್ಮ ವೈಯಕ್ತಿಕ ಆಮ್ಲಜನಕ ಕಾರ್ಖಾನೆ ಎಂಬ ಕಲ್ಪನೆ ಸರಿಯಲ್ಲ.

ಈಗ ಒಂದು ಪ್ರಶ್ನೆ ಯೋಚಿಸಿ . ಆಸ್ಪತ್ರೆಗಳಲ್ಲಿ ನೂರಾರು ರೋಗಿಗಳಿರುತ್ತಾರೆ. ಅವರಿಗೆ ಆಮ್ಲಜನಕದ ಅಗತ್ಯವೂ ಹೆಚ್ಚಿರುತ್ತದೆ. ಹಾಗಿದ್ದರೆ ಆಸ್ಪತ್ರೆಗಳು ಸಾವಿರಾರು ಪಾಟ್ ಗಿಡಗಳನ್ನು ಇಡುವ ಬದಲು ಆಮ್ಲಜನಕ ಸಿಲಿಂಡರ್‌ಗಳನ್ನು ಏಕೆ ಬಳಸುತ್ತವೆ? ಇದರ ಬಗ್ಗೆ ಸ್ವಲ್ಪ ಯೋಚಿಸಿ.

ಇನ್ನೊಂದು ಪ್ರಶ್ನೆಯನ್ನೂ ಯೋಚಿಸಿ. ಒಂದು ದೊಡ್ಡ ಆಲದ ಮರ ಅಥವಾ ಅರಳಿ ಮರದಲ್ಲಿ ಸಾವಿರಾರು ಎಲೆಗಳಿರುತ್ತವೆ. ಒಂದು ಚಿಕ್ಕ ಪಾಟ್ ಗಿಡದಲ್ಲಿ ಕೆಲವೇ ಎಲೆಗಳು ಇರುತ್ತವೆ. ಹಾಗಾದರೆ ಒಂದು ದೊಡ್ಡ ಮರದ ಮಹತ್ವ ಎಷ್ಟು ದೊಡ್ಡದು ಎಂಬುದನ್ನು ನಾವು ಊಹಿಸಬಹುದಲ್ಲವೇ?

**ಒಂದು ಚಿಕ್ಕ ಪಾಟ್ ಗಿಡ ನಿಮ್ಮ ದಿನದ ಆಮ್ಲಜನಕದ ಅಗತ್ಯವನ್ನು ಪೂರೈಸುವುದಿಲ್ಲ. ಆದರೆ ಅದರಿಂದ ಅದರ ಮಹತ್ವ ಕಡಿಮೆಯಾಗುವುದಿಲ್ಲ. ಮನೆಯೊಳಗೆ ಗಿಡಗಳನ್ನು ಬೆಳೆಸೋಣ. ಅದಕ್ಕಿಂತಲೂ ಮುಖ್ಯವಾಗಿ ನಮ್ಮ ಸುತ್ತಮುತ್ತ ಹೆಚ್ಚು ಹೆಚ್ಚು ದೊಡ್ಡ ಮರಗಳನ್ನು ಬೆಳೆಸೋಣ. ಏಕೆಂದರೆ**

**ನಮ್ಮ ನಿಜವಾದ ಆಮ್ಲಜನಕದ ಕಾರ್ಖಾನೆಗಳು ಪಾಟ್ ಗಿಡಗಳಲ್ಲ, ನಮ್ಮ ಕಾಡುಗಳು ಮತ್ತು ದೊಡ್ಡ ಮರಗಳು.**

**ಯೋಚಿಸಿ ನೋಡಿ:** *ಒಂದು ದೊಡ್ಡ ಮರವು ತನ್ನ ಜೀವಿತಾವಧಿಯಲ್ಲಿ ಪರಿಸರಕ್ಕೆ ನೀಡುವ ಕೊಡುಗೆ ಎಷ್ಟು?* **ಇದರ ಉತ್ತರವನ್ನು ಮುಂದಿನ ಪ್ರತಿಭಾ ಪತ್ರಿಕೆಯ ಸಂಚಿಕೆಯಲ್ಲಿ ತಿಳಿಯೋಣ.**

**ಧನ್ಯವಾದಗಳು**